ಕನ್ನಡ ರತ್ನ

# ಸಾಹಿತ್ಯ ಚಿಂತನೆ



ಸಂಪಾದಕರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಪ್ರೊ. ಎ. ವಿ. ನಾವಡ

ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

# ೨. ನವರಸಗಳು ಮತ್ತು ಭಾವಗಳು

– ಪ್ರೊ. ಎನ್. ರಂಗನಾಥಶರ್ಮ

ಭಾರತೀಯ ಸಾಹಿತ್ಯವನ್ನು ವಿದ್ವಾಂಸರು ಶಾಸ್ತ್ರ, ಕಾವ್ಯ ಎಂದು ಎರಡು ಬಗೆಯಾಗಿ ವಿಂಗಡಿಸಿದ್ದಾರೆ. ಶಾಸ್ತ್ರವನ್ನು ರಚಿಸಲು ಪ್ರಜ್ಞೆ ಕಾರಣ. ಪ್ರಜ್ಞೆ ಎಂದರೆ ನಿರಂತರವಾದ ವಿಚಾರ, ಪರಿಶೀಲನ, ಪರೀಕ್ಷೆಗಳನ್ನೊಳಗೊಳ್ಳುತ್ತದೆ. ಇದರಲ್ಲಿ ಬುದ್ಧಿಯದು ಮುಖ್ಯಪಾತ್ರ. ಶಾಸ್ತ್ರವನ್ನು ಅಭ್ಯಾಸಮಾಡುವವನಿಗೂ ಇಂತಹ ಪ್ರಜ್ಞೆ ಅವಶ್ಯಕ. ಸಾಹಿತ್ಯದ ಇನ್ನೊಂದು ಭಾಗವಾದ ಕಾವ್ಯವನ್ನು ರಚಿಸಲು ಪ್ರತಿಭೆ ಕಾರಣ. ಪ್ರತಿಭೆ ಬುದ್ಧಿಯ ಒಂದು ರೂಪಾಂತರವೇ. ಆದರೆ ಅದರೊಡನೆ ಚಿತ್ತವೃತ್ತಿಗಳ ಉದ್ರೇಕವಿರುತ್ತದೆ. ಉದ್ರಿಕ್ತವಾದ ಚಿತ್ತವೃತ್ತಿಯೇ ಭಾವ. ಅಲೆಗಳಂತಿರುವ ಭಾವಗಳೇ ಪರಿವಾರವಾಗಿ ಬಂದಾಗ ಬುದ್ಧಿಯ ಕಾವ್ಯಕ್ಕೆ ಇಂಬುಗೊಡುತ್ತದೆ. ಕಾವ್ಯವನ್ನು ಆಸ್ವಾದಿಸುವುದಕ್ಕೂ ಕವಿಗಿರುವ ಚಿತ್ತವೃತ್ತಿ ಬೇಕು. ಕವಿಯ ಹೃದಯದೊಂದಿಗೆ ರಸಿಕನ ಹೃದಯ ಸಮಾನತೆಯನ್ನು ಅನುಭವಿಸಿದಾಗ ಕಾವ್ಯದ ಇಂಪು ತಿಳಿದೀತು. ಆಗ ರಸಿಕನು 'ಸಹೃದಯ'ನೆನಿಸುವನು.

ಕವಿಯ ಕಾವ್ಯರಚನೆಗೆ, ಸಹೃದಯನ ಕಾವ್ಯಾಸ್ವಾದನೆಗೆ ಉಪಕರಿಸುವ ಉದ್ದೇಶದಿಂದ 'ಕಾವ್ಯಮೀಮಾಂಸೆ' ಉದಯಿಸಿತು. ಬಹುಮಂದಿ ಪಂಡಿತರು ತಮ್ಮ ಪ್ರಜ್ಞೆಯಿಂದ ಇದನ್ನು ಶಾಸ್ತ್ರವನ್ನಾಗಿ ಬೆಳೆಸಿದರು. ಪ್ರಜ್ಞೆಯೂ, ಪ್ರತಿಭೆಯೂ ಗಂಗಾ ಯಮುನೆಗಳಂತೆ ಸಂಗಮಿಸಿದವು. ಸಂಗಮಿಸಿ ಹರಿದು ಅಲಂಕಾರ ಶಾಸ್ತ್ರ ವೆಂಬ ಸಾಗರವನ್ನು ಸೇರಿದವು. ಸಾಗರದಲ್ಲಿ ಮುಳುಗಿ ಸಹೃದಯರಾದ ವಿದ್ವಾಂಸರು ಎತ್ತಿ ತೆಗೆದ ರತ್ನಗಳೇ ರಸಗಳು, ಭಾವಗಳು.

> ಕಾನ್ ಪೃಚ್ಛಾಮಃ ಸುರಾಃ ಸ್ವರ್ಗೇ ನಿವಸಾಮೋ ವಯಂ ಭುವಿ ।
> ಕಿಂ ವಾ ಕಾವ್ಯರಸಃ ಸ್ವಾದುಃ ಕಿಂವಾ ಸ್ವಾದೀಯಸೀ ಸುಧಾ ॥

"ದೇವತೆಗಳು ಸ್ವರ್ಗದಲ್ಲಿದ್ದಾರೆ. ನಾವು ಭೂಮಿಯಲ್ಲಿದ್ದೇವೆ. ಯಾರನ್ನು ಕೇಳೋಣ – 'ಕಾವ್ಯರಸವು ಹೆಚ್ಚು ಸವಿಯಾಗಿರುವುದೋ? ಅಮೃತವೋ? ಎಂದು?'

ಕಾವ್ಯವನ್ನು ಮನದಣಿಯುವಂತೆ ಸವಿದು ಆನಂದಿಸಿದ ರಸಿಕನೊಬ್ಬನ ಮೆಚ್ಚಿಗೆಯ ಮಾತಿದು. ಕವಿಯು ತನ್ನ ಪ್ರತಿಭೆಯಿಂದ ಕಥಾವಸ್ತುವನ್ನು ಹೆಣೆಯುತ್ತಾನೆ. ಅದು ಚಮತ್ಕಾರಿಯಾಗುವಂತೆ 'ಅಲಂಕಾರ'ಗಳಿಂದ ಸಿಂಗರಿಸಿದರೂ ರಸ, ಭಾವಗಳಿಲ್ಲದಿದ್ದಲ್ಲಿ ಸಪ್ಪೆಯೇ. ರಸಭಾವಗರ್ಭಿತವಾದ ಕವಿತೆಯ ರಚನೆ ಸಾಮಾನ್ಯ ಕವಿಗೆ ಕಠಿಣವೇ. ಏಕೆಂದರೆ, ರಸ–ಭಾವಗಳು ವಸ್ತು ಅಲಂಕಾರಗಳಂತೆ ವಾಚ್ಯವಲ್ಲ.

ಇವನ್ನು ನೇರವಾಗಿ ಶಬ್ದಗಳಿಂದ ವರ್ಣಿಸಲು ಸಾಧ್ಯವಿಲ್ಲ. ರಸ-ಭಾವಗಳು ಕೇವಲ ವ್ಯಂಗ್ಯ. ಅವನ್ನು ಅಭಿವ್ಯಂಜಿಸತಕ್ಕ ಸಾಮಗ್ರಿಗಳನ್ನು ವರ್ಣಿಸಿ ಅವುಗಳ ಮೂಲಕ ರಸ-ಭಾವಗಳು ಸಹೃದಯನ ಅಂತರಂಗಕ್ಕೆ ಗೋಚರಿಸುವಂತೆ ಕವಿಯು ಮಾಡುತ್ತಾನೆ.

ಹೂದೋಟದಲ್ಲಿ ಸಖಿಯುರೊಡನಿದ್ದ ಶಕುಂತಲೆ ದುಷ್ಯಂತನನ್ನು ನೋಡುತ್ತಾಳೆ. ಅನಂತರ ಸಖಿಯರ ಕೊಂಕು ಮಾತಿನಿಂದ ಹುಸಿಮುನಿಸುಗೊಂಡು ಶಕುಂತಲೆ ಹೊರಟು ಹೋಗುತ್ತಾಳೆ. ಆ ಸನ್ನಿವೇಶವನ್ನು ದುಷ್ಯಂತನು ನೆನೆಸಿಕೊಳ್ಳುತ್ತಿದ್ದಾನೆ:-

ದರ್ಭಾಂಕುರೇಣ ಚರಣಃ ಕ್ಷತ ಇತ್ಯಕಾಂಡೇ
ತನ್ವೀ ಸ್ಥಿತಾ ಕತಿಚಿದೇವ ಪದಾನಿ ಗತ್ವಾ ।
ಆಸೀದ್ವಿವೃತ್ತವದನಾ ಚ ವಿಮೋಚಯಂತೀ
ಶಾಖಾಸು ವಲ್ಕಾಲಮಸಕ್ತಮಪಿ ದ್ರುಮಾಣಾಮ್ ॥

"ಆ ಸುಂದರಿಯು ಕೆಲವೇ ಹೆಜ್ಜೆಗಳನ್ನು ಮುಂದಿಟ್ಟು ಕಾಲಿಗೆ ದರ್ಭೆ ಚುಚ್ಚಿತೆಂದು ಅನವಸರವಾಗಿ ನಿಂತುಬಿಟ್ಟಳು. ಮರದ ಕೊಂಬೆಗಳಲ್ಲಿ ಸೀರೆಯು (ಸೆರಗು) ಸಿಕ್ಕಿಕೊಳ್ಳದಿದ್ದರೂ ಅದನ್ನು ಬಿಡಿಸಿಕೊಳ್ಳುತ್ತ (ನನ್ನ ಕಡೆಗೆ) ಮುಖವನ್ನು ತಿರುಗಿಸಿದಳು."

ಈ ಶ್ಲೋಕದಲ್ಲಿ ಶಬ್ದದ ಆಡಂಬರವಿಲ್ಲ. ಅರ್ಥದ ಚಮತ್ಕಾರವಿಲ್ಲ. ಆದರೂ ಇದನ್ನೋದಿ ಸಹೃದಯನಿಗಾಗುವ ಆನಂದಕ್ಕೆ ಮಿತಿಯಿಲ್ಲ. ಶಕುಂತಲೆಗೆ ದುಷ್ಯಂತನನ್ನು ಮತ್ತೆ ನೋಡಬೇಕೆಂಬ ಆಸೆ. ಅವನೂ ತನ್ನನ್ನು ನೋಡಲೆಂಬ ಹಂಬಲ. ಸಖಿಯರೂ ದುಷ್ಯಂತನೂ ತನ್ನ ವಿಷಯವಾಗಿ ಏನು ಮಾತಾಡಿಕೊಳ್ಳುತ್ತಾರೆಂಬುದನ್ನು ತಿಳಿಯುವ ಕುತೂಹಲ ಎಷ್ಟು ಸುಮಧುರವಾಗಿ ಚಿತ್ರಿತವಾಗಿದೆ! ಈ ಭಾವಗಳೆಲ್ಲಕ್ಕೂ ಕಲಶಪ್ರಾಯವಾಗಿ ಶಕುಂತಲೆಗೆ ದುಷ್ಯಂತನಲ್ಲಿ ಅಂಕುರಿಸಿದ ಅನುರಾಗ ಮಿಂಚಿನಂತೆ ಹೊಳೆಯುತ್ತದೆ.

ಈ ಅನುರಾಗ, ಲಜ್ಜೆ, ಭಯ, ಕೋಪ, ಗರ್ವ ಮುಂತಾದವು ಅಂತಃಕರಣದ ಧರ್ಮಗಳು. ಇವನ್ನು ಚಿತ್ತವೃತ್ತಿಗಳೆಂದು ಅಲಂಕಾರಿಕರು ಹೇಳುತ್ತಾರೆ. ಇವೇ ಭಾವಗಳು. ಮನೋಭಾವ, ಭಾವೋದ್ರೇಕ ಎಂಬಲ್ಲಿ ಭಾವ ಶಬ್ದಕ್ಕೆ ಇದೇ ಅರ್ಥ. ಮನುಷ್ಯರಲ್ಲಿ ಅವರ ಸಂಸ್ಕಾರಕ್ಕೆ ತಕ್ಕಂತೆ ಕೆಲವರಲ್ಲಿ ಅತಿಯಾಗಿಯೂ, ಕೆಲವರಲ್ಲಿ ಮಿತವಾಗಿಯೂ ಇರಬಹುದು. ಲೋಕ ವ್ಯವಹಾರದಲ್ಲಿ ಕಾಮ, ಕ್ರೋಧ ಮುಂತಾದವುಗಳಿಗೆ ಕೆಲವು ಸನ್ನಿವೇಶಗಳು ಕಾರಣವಾಗುತ್ತವೆ. ಹಾಗೆಯೇ ಕಾವ್ಯದಲ್ಲಿಯೂ ಕಥಾವಸ್ತುಗಳು, ವರ್ಣನೆಗಳು ನಮ್ಮ ಭಾವಗಳನ್ನು ಕೆರಳಿಸುತ್ತವೆ. ಕಾವ್ಯವನ್ನು ಓದುವಾಗ, ನಾಟಕವನ್ನು ನೋಡುವಾಗ ನಮ್ಮ ಅಂತಃಕರಣದಲ್ಲಿ ಸುಪ್ತವಾಗಿರುವ ಈ ಚಿತ್ತವೃತ್ತಿಗಳು ಎಚ್ಚರಗೊಳ್ಳುತ್ತವೆ. ಕವಿಯ ಕಾವ್ಯರಚನಾ ವ್ಯಾಪಾರವು, ನಟನ ಅಭಿನಯ ಕೌಶಲವು

ಈ ಚಿತ್ರವೃತ್ತಿಗಳನ್ನು ಉದ್ರೇಕಿಸಿ ನಮಗೆ ಒಂದು ಅನಿರ್ವಚನೀಯವಾದ ತನ್ಮಯ ಭಾವವನ್ನುಂಟುಮಾಡುತ್ತವೆ. ಉದ್ರಿಕ್ತ ಚಿತ್ರವೃತ್ತಿಗಳೇ ರಸಕ್ಕೆ ಕಾರಣವೆಂದೂ ರಸಾನುಭವವೇ ಆನಂದವೆಂದೂ ಕಾವ್ಯಮೀಮಾಂಸಕರ ಸಿದ್ಧಾಂತ.

ಈ ಚಿತ್ತವೃತ್ತಿಗಳಲ್ಲಿ ನೂರಾರು ಭೇದಗಳಾಗಬಹುದು. ಆದರೂ ಮುಖ್ಯವಾಗಿ ೪೯ ಕಾವ್ಯರಸಾಭಿವ್ಯಕ್ತಿ ಹೇತುಗಳು. ಇವುಗಳಲ್ಲಿ ೮ನ್ನು ಸ್ಥಾಯಿಭಾವಗಳೆಂದೂ, ೩೩ನ್ನು ಸಂಚಾರಿಭಾವಗಳೆಂದೂ ಇನ್ನೂ ೮ನ್ನು ಸಾತ್ವಿಕ ಭಾವಗಳೆಂದೂ ಕರೆಯುತ್ತಾರೆ.

"ಭಾವಯಂತಿ ಕಾವ್ಯಾರ್ಥಮಿತಿ ಭಾವಾ": ಕಾವ್ಯರಸವನ್ನು ಆಸ್ವಾದಿಸುವುದಕ್ಕೆ ಸಹಾಯ ಮಾಡುತ್ತವೆಯಾದ್ದರಿಂದ ಭಾವಗಳು. ಉಪ್ಪು, ಹುಳಿ, ಕಾರ, ಸಿಹಿ, ಮುಂತಾದ ಸಾಮಗ್ರಿಗಳು ಆಹಾರವನ್ನು ರುಚಿಕಟ್ಟಾಗಿ ಮಾಡುವಂತೆ ಈ ಭಾವಗಳು ಕಾವ್ಯವನ್ನು ಸುಂದರವಾಗಿ ಮಾಡಿ ಸವಿಯನ್ನುಂಟು ಮಾಡುತ್ತವೆ. ಇವುಗಳಲ್ಲಿ ೮ ಭಾವಗಳು ಅತಿ ಮುಖ್ಯವೆಂದು ಭರತಮುನಿ ಹೇಳಿದ್ದಾನೆ.

ರತಿರ್ಹಾಸಶ್ಚ ಶೋಕಶ್ಚ ಕ್ರೋಧೋತ್ಸಾಹೌ ಭಯಂ ತಥಾ ।
ಜಿಗುಪ್ಸಾ ವಿಸ್ಮಯಶ್ಚೇತಿ ಸ್ಥಾಯಿಭಾವಾಃ ಪ್ರಕೀರ್ತಿತಾಃ ॥

ರತಿ, ಹಾಸ, ಶೋಕ, ಕ್ರೋಧ, ಉತ್ಸಾಹ, ಭಯ, ಜಿಗುಪ್ಸೆ ಮತ್ತು ವಿಸ್ಮಯಗಳಿಗೆ ಸ್ಥಾಯಿಭಾವಗಳೆಂದು ಹೆಸರು. ಸ್ಥಾಯಿ=ಸ್ಥಿರ. ಇವು ಬಹುಕಾಲ ಮನಸ್ಸಿನಲ್ಲಿ ನಿಲ್ಲುತ್ತವೆ. ಈ ಭಾವಗಳು ಎಲ್ಲಾ ಮನುಷ್ಯರಲ್ಲಿಯೂ ಇರತಕ್ಕವು. ಇವುಗಳನ್ನು ಪೋಷಿಸಲು ಸಹಾಯಕವಾಗಿ ಲಜ್ಜೆ, ಗರ್ವ, ಹರ್ಷ, ಮದ ಮುಂತಾದ ಭಾವಗಳು ಪರಿಜನರಂತೆ ಬಂದು ಸೇರಿಕೊಳ್ಳುತ್ತವೆ. ಸ್ಥಾಯಿಭಾವಗಳು 'ಸ್ವಾಮಿಭೂತ' ಗುಣಗಳೆಂದೂ, ಲಜ್ಜೆ, ಗರ್ವ ಮುಂತಾದವು 'ಅನುಚರಗುಣ'ಗಳೆಂದೂ ಭರತನು ಹೇಳುತ್ತಾನೆ. ಮೇಲೆ ಹೇಳಿದ ಸ್ಥಾಯಿಭಾವಗಳಿಂದ ಅನುಕ್ರಮವಾಗಿ ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಭತ್ಸ, ಅದ್ಭುತಗಳೆಂದು ಅಷ್ಟರಸಗಳು ಹುಟ್ಟುತ್ತವೆ. ಭರತನು ನಾಟ್ಯಶಾಸ್ತ್ರದಲ್ಲಿ ಹೇಳಿರುವುದು ಈ ಎಂಟು ರಸಗಳನ್ನು ಮಾತ್ರ. ಅಭಿನವಗುಪ್ತ, ಮಮ್ಮಟ, ಜಗನ್ನಾಥ ಮುಂತಾದ ಅಲಂಕಾರಿಕರು ಶಾಂತರಸವನ್ನು ಅಂಗೀಕರಿಸಿ ಒಟ್ಟು 'ನವರಸ'ಗಳೆಂದು ಹೇಳುವರು. ಶಾಂತರಸಕ್ಕೆ ನಿರ್ವೇದ ಅಥವಾ ಶಮ ಸ್ಥಾಯಿಭಾವ.

ಚಿತ್ತದಲ್ಲಿ ಸುಪ್ತವಾಗಿರುವ ಈ ಸ್ಥಾಯಿಗಳು ಉದ್ಬುದ್ಧವಾಗಲು ಕಾರಣಗಳು ಬೇಕು. ರತಿ ಎಂದರೆ ಸ್ತ್ರೀ ಪುರುಷರಲ್ಲಿರುವ ಅನುರಾಗ. ಸ್ತ್ರೀಗೆ ಪುರುಷನು ಕಾರಣನಾದರೆ ಪುರುಷನಿಗೆ ಸ್ತ್ರೀ ಕಾರಣ. ಈ ಅನುರಾಗ ವರ್ಧಿಸಲು ಸೌಂದರ್ಯ, ಸಂಗೀತ, ಸುಗಂಧ ಮುಂತಾದ ಸಾಮಗ್ರಿಗಳು ಕಾರಣ. ಹೀಗೆ ಎಲ್ಲಾ ಸ್ಥಾಯಿಭಾವಗಳಿಗೂ ಕಾರಣಗಳಿರುತ್ತವೆ. ಈ ಭಾವಗಳು ಉದ್ಬುದ್ಧವಾದರೆ ಕೆಲವು ಕಾರ್ಯಗಳು ನಡೆಯುತ್ತವೆ. ಇವುಗಳಿಗೆ ಚಿಂತೆ, ಔತ್ಸುಕ್ಯ ಮುಂತಾದ ಅನುಚಾರ

ಭಾವಗಳು ಸಹಕಾರಿಗಳಾಗಿ ಕೆಲಸ ಮಾಡುತ್ತವೆ. ಸ್ಥಾಯಿಭಾವಗಳ ಕಾರಣವನ್ನು ವಿಭಾವವೆಂತಲೂ, ಕಾರ್ಯವನ್ನು ಅನುಭಾವವೆಂತಲೂ, ಸಹಕಾರಿ ಭಾವವನ್ನು ಸಂಚಾರಿ ಭಾವ ಅಥವಾ ವ್ಯಭಿಚಾರಿಭಾವವೆಂತಲೂ ಕರೆಯುತ್ತಾರೆ.

ವಿಭಾವದಲ್ಲಿ ಆಲಂಬನ ವಿಭಾವ, ಉದ್ದೀಪನ ವಿಭಾವ ಎಂದು ಎರಡು ವಿಧ. ರತಿ, ಕ್ರೋಧ, ಮುಂತಾದವುಗಳಿಗೆ ಯಾರು ಮುಖ್ಯವಾದ ಕಾರಣಭೂತರೋ ಅವರು ಆಲಂಬನ ವಿಭಾವ. ಅವನ್ನು ವರ್ಧಿಸುವ ಸಾಮಗ್ರಿ ಉದ್ದೀಪನ ವಿಭಾವ. ದುಷ್ಯಂತನ ರತಿಗೆ ಶಕುಂತಲೆ ಆಲಂಬನ ವಿಭಾವ. ಶಕುಂತಲೆಯ ರತಿಗೆ ದುಷ್ಯಂತ ಆಲಂಬನ ವಿಭಾವ; ಉದ್ಯಾನವನ, ವಸಂತಋತು, ಬೆಳದಿಂಗಳು ಮುಂತಾದವು ಉದ್ದೀಪನ ವಿಭಾವಗಳು. ಮುಖಾವಲೋಕನ, ಸಂಭಾಷಣೆ, ಪ್ರಣಯಪತ್ರಲೇಖನ ಮೊದಲಾದುವು ಅನುಭಾವಗಳು. ರೋಮಾಂಚ, ಸ್ವೇದ ಮುಂತಾದ ಸಾತ್ವಿಕ ಭಾವಗಳೂ ಅನುಭಾವಗಳೇ. ಚಿಂತೆ, ಔತ್ಸುಕ್ಯ ಮೊದಲಾದ ಅನುಚರಭಾವಗಳು ಸಂಚಾರಿ ಭಾವಗಳು. ಈ ವಿಭಾವ, ಅನುಭಾವ, ಸಂಚಾರಿಭಾವಗಳಿಂದ ದುಷ್ಯಂತನ ಅಥವಾ ಶಕುಂತಲೆಯ ರತಿಯು ಸಹೃದಯನಿಗೆ ಗೋಚರವಾಗಿ ಶೃಂಗಾರ ರಸ ವಾಗುತ್ತದೆ.

ಭೀಮಸೇನನ ಕ್ರೋಧಕ್ಕೆ ದುರ್ಯೋಧನ ಆಲಂಬನ ವಿಭಾವ; ದ್ರೌಪದೀ ವಸ್ತ್ರಾಪಹರಣ, ಕಪಟದ್ಯೂತ, ವಿಷಾನ್ನಭೋಜನ ಮೊದಲಾದವು ಉದ್ದೀಪನ ವಿಭಾವ. ಕರ್ಣಕಠೋರವಾದ ಭೀಮನ ಮಾತು, ಹಲ್ಲುಕಡಿಯುವುದು, ಗದಾಪ್ರಹಾರ ಮುಂತಾದ ಕಾರ್ಯಗಳೂ, ಸ್ವೇದ, ವೈಸ್ವರ್ಯ ಮೊದಲಾದ ಸಾತ್ತ್ವಿಕಭಾವಗಳೂ ಅನುಭಾವ. ವೇಗ, ಉಗ್ರತೆ ಮೊದಲಾದವು ವ್ಯಭಿಚಾರಿ ಭಾವಗಳು. ಇವುಗಳಿಂದ ಭೀಮನ ಕ್ರೋಧವು ಸಹೃದಯನಿಗೆ ಗೋಚರಿಸಿ ರೌದ್ರರಸವು ಅಭಿವ್ಯಕ್ತವಾಗುತ್ತದೆ. ಹೀಗೆ ಎಲ್ಲಾ ರಸಗಳಿಗೂ ವಿಭಾವ, ಸಂಚಾರಿಭಾವಗಳು ಇರುತ್ತವೆ. ಕಾವ್ಯದಲ್ಲಿ ಕೆಲವೆಡೆ ಇವುಗಳ ವರ್ಣನೆ ಅಪೂರ್ಣವಾಗಿರಬಹುದು. ಸಂದರ್ಭೋಚಿತವಾಗಿ ಅವುಗಳನ್ನು ಸಹೃದಯನು ಊಹಿಸಿಕೊಳ್ಳುತ್ತಾನೆ. ಸಮರ್ಥನಾದ ನಟನು ಅಭಿನಯಿಸಿ ತೋರಿಸುತ್ತಾನೆ.

ಸಂಚಾರಿಭಾವಗಳು: ನಿರ್ವೇದ, ಗ್ಲಾನಿ, ಶಂಕೆ, ಶ್ರಮ, ಧೃತಿ, ಜಡತೆ, ಹರ್ಷ, ದೈನ್ಯ, ಉಗ್ರತೆ, ಚಿಂತೆ, ತ್ರಾಸ (ಗುಡುಗು, ಸಿಡಿಲು ಮುಂತಾದ್ದರಿಂದ ಆಗುವ ಮನಸ್ಸಿನ ತಳಮಳ), ಅಸೂಯೆ, ಅಮರ್ಷ, ಗರ್ವ, ಸ್ಮೃತಿ, ಮರಣ, ಮದ, ಸುಪ್ತ, ನಿದ್ರೆ (ಅರೆನಿದ್ರೆ), ವಿಬೋಧ, ಲಜ್ಜೆ, ಅಪಸ್ಮಾರ, ಮೋಹ, ಮತಿ, ಆಲಸ್ಯ, ಅವೇಗ, ಅವಹಿತ್ಥ (ಮನೋವಿಕಾರವನ್ನು ಅಡಗಿಸಿಕೊಳ್ಳುವುದು), ವ್ಯಾಧಿ, ಉನ್ಮಾದ, ವಿಷಾದ, ಔತ್ಸುಕ್ಯ ಮತ್ತು ಚಪಲತೆ. ಇವು ಮೂವತ್ತು ಮೂರು.

ಸಾತ್ತ್ವಿಕಭಾವಗಳು:– ಸ್ತಂಭ (ಅಂಗಗಳ ನಿಶ್ಚೇಷ್ಟತೆ), ಪ್ರಲಯ (ಪ್ರಜ್ಞಾಹೀನತೆ), ರೋಮಾಂಚ, ಸ್ವೇದ, ವಿವರ್ಣತೆ, ವೇಪಥು (ನಡುಕ), ಅಶ್ರು ಮತ್ತು ವೈಸ್ವರ್ಯ (ಗದ್ಗದ ಮುಂತಾದ ಸ್ವರವಿಕಾರ) ಇವು ಎಂಟು. ಜೃಂಭಾ (ಆಕಳಿಕೆ) ಎಂಬುದು

ಒಂಭತ್ತನೆಯದೆಂದು ಭಾನುದತ್ತನ ರಸತರಂಗಿಣಿ.

ಈ ಸಾತ್ತ್ವಿಕಭಾವಗಳು ಯಾವುದಾದರೊಂದು ಭಾವದ ಕಾರ್ಯಗಳು. ಆದ್ದರಿಂದ ಇವು ಅನುಭಾವಗಳೇ. ಇವು ಶರೀರದಲ್ಲಾಗುವ ಕ್ರಿಯೆಗಳು; ಚಿತ್ತವೃತ್ತಿಯನ್ನೇ ಸಾತ್ತ್ವಿಕಭಾವವೆಂದು ತಿಳಿಯಬೇಕು. ಸ್ತಂಭಕ್ರಿಯೆಗೆ ಕಾರಣವಾದ ಚಿತ್ತವೃತ್ತಿ ಸ್ತಂಭ; ಹೀಗೆ.

'ವಿಭಾವಾನುಭವ ವ್ಯಭಿಚಾರಿ ಸಂಯೋಗಾದ್ರಸ ನಿಷ್ಪತ್ತಿಃ' ಎಂದು ಭರತನು ಸೂತ್ರಿಸಿದನು. 'ವಿಭಾವ, ಅನುಭಾವ ಮತ್ತು ಸಂಚಾರಿಭಾವಗಳ ಸಂಯೋಗದಿಂದ ರಸವು ನಿಷ್ಪನ್ನವಾಗುತ್ತದೆ' ಎಂದು ಸರಳವಾದ ಅರ್ಥ. ಇದರ ಮೇಲೆ ಭಟ್ಟಲೊಲ್ಲಟ, ಭಟ್ಟನಾಯಕ, ಶಂಕುಕ ಮತ್ತು ಅಭಿನವಗುಪ್ತರು ವಾದ ಕೋಲಾಹಲವನ್ನೇ ಎಬ್ಬಿಸಿದ್ದಾರೆ. ಈಗ ಅಭಿನವಗುಪ್ತನ ಸಿದ್ಧಾಂತವನ್ನೇ ಹೆಚ್ಚು ಕಡಿಮೆ ಎಲ್ಲಾ ಅಲಂಕಾರಿಕರೂ ಒಪ್ಪಿದ್ದಾರೆನ್ನಬಹುದು. ಈ ಸಿದ್ಧಾಂತದ ಸಾರಾಂಶ ಇಷ್ಟು:–

''ರಸನಿಷ್ಪತ್ತಿ' ಎಂದರೆ ರಸದ ಅಭಿವ್ಯಕ್ತಿ. ಇದನ್ನು ರಸಾಸ್ವಾದ, ರಸಚರ್ವಣಾ ಎಂದು ಕರೆಯಬಹುದು, ಶಬ್ದಕ್ಕೆ ಅರ್ಥವನ್ನು ಬೋಧಿಸುವ ಶಕ್ತಿಯುಂಟಷ್ಟೆ. ಅಭಿಧಾ, ಲಕ್ಷಣಾ, ವ್ಯಂಜನಾ ಎಂದು ಈ ಶಕ್ತಿ ಮೂರು ವಿಧ. ಕಾವ್ಯದಲ್ಲಿ ವ್ಯಂಜನಾ ವ್ಯಾಪಾರದ ಕೈವಾಡವೇ ಮುಖ್ಯ. ರಸ, ಭಾವಗಳು ಗೋಚರಿಸುವುದು ಇದರಿಂದಲೇ. ಕಾವ್ಯವನ್ನು ಓದಿದಾಗ ಅಥವಾ ನಟನ ಅಭಿನಯವನ್ನು ನೋಡಿದಾಗ ನಾವು ತನ್ಮಯೀಭಾವವನ್ನು ಹೊಂದುತ್ತೇವೆ. ವಿಭಾವಾದಿಗಳು ಸರ್ವಸಾಮಾನ್ಯವಾಗಿ ಮಾರ್ಪಡುತ್ತವೆ. ಶಕುಂತಲೆಯಲ್ಲಿರುವ ಶಕುಂತಲೆ ಎಂಬ ಧರ್ಮ ಕಳಚಿ, ಇವಳು 'ಕಾಂತೆ' ಎಂಬ ಒಂದೇ ಅಂಶ ಉಳಿಯುತ್ತದೆ. ಇವನು ದುಃಶಾಸನ ಎಂಬ ಭಾವನೆಯಡಗಿ 'ಇವನು ಅಪರಾಧ ಮಾಡಿದ ಶತ್ರು' ಎಂಬ ಅಂಶ ಮಾತ್ರ ಉಳಿಯುತ್ತದೆ. ಹಾಗೆಯೇ ದುಷ್ಯಂತ, ಭೀಮಸೇನ ಇವರು ಅನ್ಯರೆಂಬ ಭಾವನೆಯಡಗಿ ನಾನೇ ದುಷ್ಯಂತ, ದುಷ್ಯಂತನೇ ನಾನು, ನಾನೇ ಭೀಮಸೇನ, ಭೀಮಸೇನನೇ ನಾನು ಎಂಬ ತಾದಾತ್ಮ್ಯಭಾವ ಉಂಟಾಗುತ್ತದೆ. ಹಾಗೆಯೇ ರತಿಕ್ರೋಧಾದಿ ಸ್ಥಾಯಿಭಾವಗಳೂ 'ನನಗೆ ಸಂಬಂಧಿಸಿಲ್ಲ' ಎಂಬ ಭಾವನೆಯೂ ಇರುವುದಿಲ್ಲ. ಭೀಮನ ಪಾತ್ರವನ್ನು ಅಭಿನಯಿಸುವ ನಟನನ್ನು ನೋಡಿ ಇವನೇ ಭೀಮನೆಂಬ ಭ್ರಾಂತಿಜ್ಞಾನ ಚಿತ್ತಭೂಮಿಕೆಯಲ್ಲಿ ಮೊದಲು ನೆಲೆಗೊಳ್ಳುವುದು. ಆಮೇಲೆ ನಾನೇ ಭೀಮ, ಭೀಮನೇ ನಾನು ಎಂಬ ಅಭೇದಜ್ಞಾನ ಮೂಡುವುದು. ನಟನ ಅಭಿನಯದಿಂದ ಸಹೃದಯನ ಚಿತ್ತವೃತ್ತಿ ಕೆರಳುವುದು. ಭೀಮನ ಕ್ರೋಧದಿಂದ ತನಗೇ ಕ್ರೋಧ ಬಂದಿದೆಯೆಂಬ ಒಂದು ವಿಲಕ್ಷಣ ಅನುಭವ ಸಹೃದಯನಿಗಾಗುವುದು. ಕಾಲಭೇದ, ವಯೋಭೇದಗಳೆಲ್ಲಾ ಅಳಿಸಿಹೋಗುತ್ತವೆ. ಆಗ ನಮ್ಮ ಚಿತ್ತದಲ್ಲಿರುವ ರಜೋಗುಣ, ತಮೋಗುಣಗಳು ಅಡಗಿಹೋಗಿ ಸತ್ತ್ವಗುಣವು ಎದ್ದು ನಿಲ್ಲುತ್ತದೆ. ಈ ಚಿತ್ತಕ್ಕೆ ವಿಭಾವಾದಿ ಸಮೂಹಗಳೊಡನೆ ಅವುಗಳಿಂದ ಅಭಿವ್ಯಕ್ತವಾಗುವ ರತ್ಯಾದಿ ಸ್ಥಾಯಿಭಾವ ಗೋಚರಿಸುತ್ತದೆ. ಈ ರೀತಿಯಲ್ಲಿ ಸಹೃದಯನ ಜ್ಞಾನಕ್ಕೆ

ಗೋಚರಿಸುವ ರತ್ಯಾದಿಯೇ ರಸ ಅಥವಾ ಅಭಿವ್ಯಕ್ತವಾದ ರತ್ಯಾದಿಗಳ ಜ್ಞಾನವೇ ರಸ.

ಈ ಸ್ಥಾಯಿಭಾವವು ಯಾರಲ್ಲಿಲ್ಲವೋ – ಯಾರು ಲೋಕದಲ್ಲಿ ಇದನ್ನು ಅನುಭವಿಸಿಲ್ಲವೋ– ಅವರಿಗೆ ಕಾವ್ಯದಲ್ಲಿ ರಸಾಸ್ವಾದವಾಗಲಾರದು. ಉದಾ: ಬಾಲಕರಿಗೆ ಶೃಂಗಾರವು ರುಚಿಸದು. ಅನುಭವ, ಸಂಸ್ಕಾರ, ಅಭಿರುಚಿಗಳು ರಸಾಸ್ವಾದನೆಗೆ ಆವಶ್ಯಕ. ಈ ರಸ ಚರ್ವಣಾಶಕ್ತಿಯನ್ನು ಕಾವ್ಯಾಭ್ಯಾಸದಿಂದ ಹೆಚ್ಚಿಸಿಕೊಳ್ಳಬಹುದು.

ಇವೆಲ್ಲವೂ ಕಾವ್ಯದಲ್ಲಿರುವ ವ್ಯಂಜನಾ ವ್ಯಾಪಾರದ ಮಹಿಮೆಯಿಂದ ನಡೆಯುತ್ತವೆ. ರತ್ಯಾದಿಭಾವಗಳ ಜ್ಞಾನವೇ ರಸವೆಂದಾಗ ರಸವು ಯಾರಲ್ಲಿದೆ ಎಂಬ ಪ್ರಶ್ನೆಯೇ ಉಳಿಯುವುದಿಲ್ಲ. ಅದು ಸಹೃದಯನಲ್ಲಿರುತ್ತದೆಯೆಂಬುದು ಸ್ಪಷ್ಟ. ಜ್ಞಾನವೇ ಚಿತ್. ಅದೇ ಆನಂದಸ್ವರೂಪವಾದದ್ದು. ಆದ್ದರಿಂದ ರಸವೇ ಆನಂದ. ಇದು ಒಂದೇ ಆದರೂ ಉಪಾಧಿಭೇದದಿಂದ ಬೇರೆ ಬೇರೆ ಹೆಸರನ್ನು ಪಡೆಯುತ್ತದೆ. ರತಿವಿಶಿಷ್ಟವಾದ ಚಿತ್ ಶೃಂಗಾರರಸ; ಕ್ರೋಧವಿಶಿಷ್ಟವಾದ ಚಿತ್ ರೌದ್ರ ರಸ; ಶೋಕವಿಶಿಷ್ಟವಾದ ಚಿತ್ ಕರುಣ ರಸ– ಹೀಗೆ.

ಇನ್ನೊಂದು ವಿಚಾರ. ಶೃಂಗಾರ ರಸಕ್ಕೆ ಶಕುಂತಲೆ ಕಾರಣಳೆಂದಾದರೆ ಅವಳು ಈಗ ಇಲ್ಲ. ನಟಿಯನ್ನೇ ಶಕುಂತಲೆಯೆಂದು ತಿಳಿದುಕೊಂಡರೂ ಅವಳು ದುಷ್ಯಂತನ ರತಿಗೆ ಕಾರಣಳೇ ಹೊರತು ಸಹೃದಯನ ರತಿಗಲ್ಲ. ಶ್ರವ್ಯಕಾವ್ಯದಲ್ಲಿ ನಟಿಯೂ ಇಲ್ಲ. ಆದ್ದರಿಂದ ವ್ಯಂಜನಾ ವ್ಯಾಪಾರದಿಂದ ಸಾಧಾರಣೀಕೃತಳಾದ ಶಕುಂತಳೆ ಬರಿಯ 'ಕಾಂತೆ'ಯಾಗಿ ಶೃಂಗಾರ ರಸಕ್ಕೆ ವಿಭಾವಕಾರಣವಾಗುತ್ತಾಳೆ. ಅವಳಾದರೂ ಎಲ್ಲಿದ್ದಾಳೆ? ಅವಳನ್ನು ನಾವು ಬುದ್ಧಿಯಲ್ಲಿ ಕಲ್ಪಿಸಿಕೊಳ್ಳುತ್ತೇವೆ. ಬುದ್ಧಿಪರಿಕಲ್ಪಿತಳಾದ 'ಬೌದ್ಧಶಕುಂತಲೆ' ವಿಭಾವ. ರತಿಯಿಂದಾದ ದುಷ್ಯಂತನ ಅನುಭಾವಗಳನ್ನು ತಾದಾತ್ಮ್ಯ ಭಾವನೆಯಿಂದ ನಮ್ಮ ಕಾರ್ಯಗಳೇ ಎಂದು ಭಾವಿಸಿಕೊಳ್ಳುತ್ತೇವೆ. ಸ್ವೇದ, ರೋಮಾಂಚ ಮುಂತಾದ ಸಾತ್ತ್ವಿಕಭಾವಗಳೂ, ಚಿಂತೆ, ಔತ್ಸುಕ್ಯ ಮುಂತಾದ ಸಂಚಾರಿಭಾವಗಳೂ ನಮ್ಮಲ್ಲಿಯೇ ಉಂಟಾಗುತ್ತವೆ. ಒಟ್ಟಿನಲ್ಲಿ ವಿಭಾವವು ಬುದ್ಧಿ ಪರಿಕಲ್ಪಿತವೆಂದೂ, ಅನುಭಾವವು ತನ್ನದೇ ಆದ ಆರೋಪಿತಜ್ಞಾನಕ್ಕೆ ವಿಷಯವಾಗಿ ಅದೂ ಬುದ್ಧಿಪರಿಕಲ್ಪಿತವೆಂದೂ, ಸಾತ್ತ್ವಿಕ ಮತ್ತು ಸಂಚಾರಿ ಭಾವಗಳು ಸಹೃದಯನಿಷ್ಠವೆಂದೂ ಸಿದ್ಧವಾಗುತ್ತದೆ. ಇದರ ಬಗ್ಗೆ ಹೆಚ್ಚಿನ ವಿವರವನ್ನು 'ನಾಟ್ಯದರ್ಪಣ'ದಲ್ಲಿ ನೋಡಬಹುದು.

ಈ ರಸಗಳೆಲ್ಲಾ ಆನಂದಾತ್ಮಕಗಳೆ? ಕರುಣದಲ್ಲಿ ಆನಂದ ಉಂಟೊ? ಇದೆಯೆಂದೂ, ಆದ್ದರಿಂದಲೇ ಜನರು ಶೋಕಪೂರ್ಣವಾದ ಕಾವ್ಯ–ನಾಟಕಗಳನ್ನು ಮೆಚ್ಚುತ್ತಾರೆಂದೂ ಅನೇಕರ ಹೇಳಿಕೆ. ಹಾಗಿದ್ದರೆ ಹರಿಶ್ಚಂದ್ರನ ದುಃಖ, ಸೀತಾದೇವಿಯ ಕಷ್ಟಗಳಿಂದ ಪ್ರೇಕ್ಷಕರಿಗೆ ಕಣ್ಣೀರು ಸುರಿಯುವುದೇಕೆ? ಇದು ಆನಂದಭಾಷ್ಪವೆಂದು ಹಲವರ ಉತ್ತರವಿದೆ.

ವಸ್ತುತಃ 'ಸುಖದುಃಖಾತ್ಮಕೋ ರಸಃ' ಎಂಬ ನಾಟ್ಯದರ್ಪಣಕಾರನ ಮಾತು ಸತ್ಯವೆಂದು ತೋರುತ್ತದೆ. 'ರಸಾ ಹಿ ಸುಖದುಃಖಾವಸ್ಥಾರೂಪಾಃ' ಎಂದು ಭೋಜನು ಹೇಳುತ್ತಾನೆ. ಕರುಣ, ರೌದ್ರ, ಭೀಭತ್ಸ, ಭಯಾನಕರಸಗಳಲ್ಲಿ ದುಃಖದ ಅನುಭವ ಉಂಟು. ರಸಾಸ್ವಾದ ಕಾಲದಲ್ಲಿ ದುಃಖವಾದರೂ ಆಸ್ವಾದ ವಿರಾಮಕಾಲದಲ್ಲಿ ಕವಿಯ ವರ್ಣನಾಕೌಶಲವೂ ನಟನ ಅಭಿನಯ ನೈಪುಣ್ಯವೂ ನಮಗೆ ಹರ್ಷವನ್ನುಂಟು ಮಾಡುತ್ತದೆ. ಕವಿ ಚಮತ್ಕಾರದಿಂದ ನಾವು ಮೋಸಹೋಗುತ್ತೇವೆ. ರಸಚರ್ವಣಾಕಾಲದಲ್ಲಿ ಸುಖದುಃಖಗಳೆರಡೂ ಅನುಭವಕ್ಕೆ ಬರಬಹುದು. ಶುಂಠಿಯ ರಸವನ್ನು ಜೇನುತುಪ್ಪದೊಡನೆ ಸೇರಿಸಿ ಸೇವಿಸಿದಂತೆ, ಮೆಣಸನ್ನು ಸೇರಿಸಿದ ಪಾನಕವನ್ನು ಕುಡಿದಂತೆ ಸಿಹಿ–ಖಾರಗಳ ಅನುಭವ ಒಟ್ಟಿಗೆ ಬರುವುದೆಂದರೂ ಸಲ್ಲುತ್ತದೆ. 'ಸುಖದುಃಖಾತ್ಮಕೋ ರಸಃ' ಎಂದು ಅಲಂಕಾರಿಕರು ಒಪ್ಪಿದ್ದಾರಷ್ಟೆ. ರಸದಲ್ಲಿ ದುಃಖಾಂಶವಿಲ್ಲ, ಎಲ್ಲಾ ರಸಗಳೂ ಆನಂದಾತ್ಮಕಗಳೇ ಎನ್ನುವ ಅಲಂಕಾರಿಕರೂ ಇದ್ದಾರೆ.

ಪ್ರಧಾನವಾದ ಒಂದೇ ರಸವನ್ನು ಒಪ್ಪಿ ಉಳಿದವುಗಳನ್ನು ಪ್ರಧಾನದಲ್ಲಿ ಅಂತರ್ಭಾವ ಮೂಡಲು ಹಲವರು ಪ್ರಯತ್ನಿಸಿದ್ದಾರೆ. ಪ್ರಧಾನರಸ ಪ್ರಕೃತಿ; ಉಳಿದವು ವಿಕೃತಿ. ಭೋಜರಾಜನ ಅಭಿಪ್ರಾಯದಲ್ಲಿ ಶೃಂಗಾರ ಒಂದೇ ಪ್ರಧಾನರಸ. ಇದಕ್ಕೆ ಅಹಂಕಾರ ಅಥವಾ ಅಭಿಮಾನ ಸ್ಥಾಯಿಭಾವ. ಭವಭೂತಿ 'ಏಕೋರಸಃ ಕರುಣ ಏವ' ಎಂದನು. ನಾರಾಯಣಪಂಡಿತ ಅದ್ಭುತವು ಪ್ರಕೃತಿರಸ ಎಂದನು. ಆದರೆ ಮಧುಸೂದನ ಸರಸ್ವತಿಗಳು 'ಭಕ್ತಿ' ಎಂಬ ಹತ್ತನೆಯ ರಸವನ್ನು ಒಪ್ಪಿದರು. ಇಷ್ಟೇ ಅಲ್ಲ. ಪ್ರೇಯ, ವಾತ್ಸಲ್ಯ, ಸ್ನೇಹ, ಮಾಯಾ, ಮೃಗಯಾ ಮುಂತಾದ ರಸಗಳನ್ನೂ ಹಲವರು ಒಪ್ಪಿದ್ದಾರೆ. 'ನವರಸಗಳು' ಎಂಬ ಮತವೇ ಇಂದು ಸ್ಥಿರವಾಗಿ ನಿಂತಿದೆ.

ವಸ್ತುತಃ ರಸ ಇರತಕ್ಕದ್ದು ಒಂದೇ– 'ಏಕ ಏವ ತಾವತ್ ಪರಮಾರ್ಥತೋ ರಸಃ' ಎಂದು ಅಭಿನವಗುಪ್ತನು ಹೇಳುತ್ತಾನೆ. ಅದು ಶಾಂತರಸ, ಅದೇ ಮಹಾರಸ, ರಸನಿಮಿತ್ತಗಳು ಬೇರೆ. ರಸ ಒಂದೇ. ಜ್ಞಾನಸ್ವರೂಪನಾದ ಆತ್ಮನೇ ಸ್ಥಾಯಿಭಾವ. ಜಪಾಕುಸುಮಾದಿ ಸಂಯೋಗದಿಂದ ಶುದ್ಧಸ್ಫಟಿಕವು ರಕ್ತಪೀತ, ಶ್ಯಾಮವಾಗುವಂತೆ ವಿಭಾವಾದಿಗಳು ಸಂಗವಾದ ಚೈತನ್ಯವು ರತಿ, ವಿಸ್ಮಯ, ಶೋಕಾದಿರೂಪಗಳನ್ನು ಹೊಂದುತ್ತದೆ.

> ರಸಸ್ಯಾನಂದ ಧರ್ಮತ್ವಾದೈಕಧ್ಯಂ । ಭಾವ ಏವಹಿ
> ಉಪಾಧಿ ಭೇದಾನ್ನಾನಾತ್ತ್ವಂ ರತ್ಯಾದಯ ಉಪಾಧಯಃ ॥
>
> – ಕವಿಕರ್ಣಪೂರ.

ಹೀಗೆ ಕಾವ್ಯಮೀಮಾಂಸೆ ಬ್ರಹ್ಮಮೀಮಾಂಸೆಯೊಡನೆ ಸೇರಿಹೋಗುತ್ತದೆ! ಈಗ ಕೆಲವು ಉದಾಹರಣೆಗಳನ್ನು ಪರಿಶೀಲಿಸೋಣ :–

೧. ಶೃಂಗಾರ :-

ವಸಂತ ಕಾಲದಲ್ಲಿ ಶಿವನು ಸಮಾಧಿಯಿಂದ ಬಹಿರ್ಮುಖನಾಗಿದ್ದಾನೆ. ಪಾರ್ವತೀದೇವಿ ವಸಂತಲಕ್ಷ್ಮಿಯಂತೆ ಎದುರಿಗೆ ಬಂದು ಶಿವನಿಗೆ ಅಕ್ಷರಮಾಲೆಯನ್ನು ಅರ್ಪಿಸಿದ್ದಾಳೆ. ಅಡಗಿ ಕುಳಿತಿದ್ದ ಮನ್ಮಥ ಇದೇ ಸಮಯದಲ್ಲಿ ಸಂಮೋಹನಾಸ್ತ್ರವನ್ನು ಹೂಡಿದ್ದಾನೆ. ಆಗ-

ಹರಸ್ತು ಕಿಂಚಿತ್ ಪರಿವೃತ್ತ ಧೈರ್ಯಃ ಚಂದ್ರೋದಯಾರಂಭ ಇಂಬಾಬು ರಾಶಿಃ ।
ಉಮಾಮುಖೇ ಬಿಂಬ ಫಲಾಧರೋಷ್ಠೇ ವ್ಯಾಪಾರಯಾಮಾಸ ವಿಲೋಚನಾನಿ ॥

"ಶಿವನ ಮನೋಧೈರ್ಯ ಸಡಿಲಿತು. ಚಂದ್ರೋದಯಾರಂಭದಲ್ಲಿ ಸಮುದ್ರದಂತೆ ಮನಸ್ಸು ಚಲಿಸಿತು. ತೊಂಡೆಯ ಹಣ್ಣಿನಂತಹ ಅಧರವಿದ್ದ ದೇವಿಯ ಮುಖದತ್ತ ಕಣ್ಣುಗಳನ್ನು ತೊಡಗಿಸಿದನು."

ಪಾರ್ವತೀದೇವಿ ಆಲಂಬನವಿಭಾವ. ದೇವಿಯು ಸೌಂದರ್ಯ, ಪುಷ್ಪಾಲಂಕಾರ, ಏಕಾಂತ, ವಸಂತಋತು, ಉದ್ದೀಪನ ವಿಭಾವ. ದೇವೀಮುಖಾವಲೋಕನ ಅನುಭಾವ, ಹರ್ಷ, ಉತ್ಸಾಹಗಳು ಸಂಚಾರಿಭಾವ, ರತಿಸ್ಥಾಯಿ.

ಶೃಂಗಾರದಲ್ಲಿ ಎರಡು ವಿಧ. ದಂಪತಿಗಳು ಸಮೀಪದಲ್ಲಿದ್ದಾಗ ಸಂಭೋಗ ಶೃಂಗಾರ. ಅಗಲಿದ್ದಾಗ ವಿಪ್ರಲಂಭ ಶೃಂಗಾರ.

೨. ವೀರ :-

ದ್ರೋಣಾಚಾರ್ಯರು ಪದ್ಮವ್ಯೂಹವನ್ನು ಕಟ್ಟಿನಿಂತಿದ್ದಾರೆ. ಅದನ್ನು ಭೇದಿಸಲು ಅನುಜ್ಞೆ ಕೊಡಬೇಕೆಂದು ಅಭಿಮನ್ಯು ಧರ್ಮರಾಯನಿಗೆ ಹೇಳುತ್ತಿದ್ದಾನೆ.

ಬಿಡು ಮರೀಚಿಯ ತೊರೆಗೆ ಹರುಗೋ
ಲಿಡುವರುಂಟೇ ಲೆಪ್ಪದುರಗನ
ಹಿಡಿವಡೇತಕೆ ಗರುಡಮಂತ್ರವು ಚಪಲನೆನ್ನದಿರು ।
ಕೊಡನ ಮಗನ ಕುಮಂತ್ರದೊಡ್ಡಿನ
ಕಡಿತಕಾನಂಜುವೆನೆ ವೆಗ್ಗಳ
ನುಡಿಯಲಮ್ಮೆನು ತನ್ನನೀಗಳೆ ಬಿಟ್ಟು ನೋಡೆಂದ ॥

ದ್ರೋಣಾಚಾರ್ಯ ಆಲಂಬನ, ಪದ್ಮವ್ಯೂಹರಚನೆ ಉದ್ದೀಪನ, ಕೌರವ ಸೈನ್ಯದಲ್ಲಿ ಅಸಡ್ಡೆ, ದ್ರೋಣರೊಡನೆ ಪ್ರತಿಸ್ಪರ್ಧೆ ಅನುಭಾವ, ಹರಿಗೋಲು ಗರುಡಮಂತ್ರಗಳ ದೃಷ್ಟಾಂತದಿಂದ ತೋರುವ ಮತಿ, ಸಮೃತಿಗಳೂ, 'ಆನಂಜುವೆನೆ?' ಎಂಬುದರಿಂದ ಗಮ್ಯವಾಗುವ ಗರ್ವವೂ ಸಂಚಾರಿಭವಗಳು. ಉತ್ಸಾಹಸ್ಥಾಯಿ.

೩. ಕರುಣ :-

ಅಭಿಮನ್ಯುವಿನ ಮರಣವಾರ್ತೆ ತಿಳಿದಾಗ ಅರ್ಜುನನು ದುಃಖಿಸುತ್ತಾನೆ.

ಬರಲು ಬಹನಿದಿರಾಗಿ ತನ್ನಯ
ವರರಥವ ಬಂದೇರುವನು ನಿಜ
ಕರತಳದಿ ಮೈದಡವಿ ಘಾಯವ ನೋಡಿ ಮರುಗುವನು ॥
ತರುಣನಿದಿರೈತರಲು ತನ್ನಯ
ಧುರದ ಬಳಲಿಕೆ ಹಿಂಗುವುದು ಹೇ
ಳರಸ ಕಂದನ ಸುಳಿವ ಕಾಣೆನು ಕರೆಸಿ ತೋರೆಂದ ॥

ಮೃತನಾದ ಮಗ ಆಲಂಬನ. ಎದುರಿಗೆ ಬಂದು ರಥವೇರಿ ತನ್ನ ಮೈ ದಡವುತ್ತಿದ್ದುದು ಉದ್ದೀಪನ. ರೋದನ ಅನುಭವ. ದೈನ್ಯ, ಗ್ಲಾನಿ, ಚಿಂತೆಗಳು ಸಂಚಾರಿಗಳು, ಶೋಕಸ್ಥಾಯಿ.

**೪. ಅದ್ಭುತ :–**

ಶ್ರೀ ಕೃಷ್ಣನು ತೋರಿದ ವಿಶ್ವರೂಪವನ್ನು ಕಂಡು ಅರ್ಜುನನು ವಿಸ್ಮಿತನಾಗಿದ್ದಾನೆ.

ಉಬ್ಬಿದನು ಹರುಷದಲಿ ಕಂಗಳ
ಗಬ್ಬ ಮುರಿದುದು ಮದದ ನಿಗುರಿನ
ಹೆಬ್ಬುಗೆಯ ಹೊಲಬಳಿಯೆ ನಾಲಗೆಯುಡುಗೆ ಹೆಡತಲೆಗೆ
ಸಬ್ಬಗತನ್ಯೆ ಶಿವಶಿವಾ ಬಲು
ಮಬ್ಬಿನಲಿ ಮುಂದರಿಯದೆನ್ನಯ
ಕೊಬ್ಬನೇವಣ್ಣಿಸುವೆನೆನುತಡಿಗಡಿಗೆ ಬೆರಗಾದ ॥

ವಿಶ್ವರೂಪಧಾರಿಯಾದ ಶ್ರೀಕೃಷ್ಣ ಆಲಂಬನ, ಇಡೀ ವಿಶ್ವದರ್ಶನ ಉದ್ದೀಪನ, ನಮಸ್ಕಾರ ಸ್ತೋತ್ರಗಳು ಅನುಭಾವ. ದೈನ್ಯ, ಮತಿ, ಧೃತಿ, ಹರ್ಷಗಳು ಸಂಚಾರಿ. ವಿಸ್ಮಯಸ್ಥಾಯಿ.

**೫. ರೌದ್ರ :–**

ಭೀಮನಿಗೂ, ದುರ್ಯೋಧನನಿಗೂ ಗದಾಯುದ್ಧ ನಡೆಯುತ್ತದೆ. ದುರ್ಯೋಧನನ ತಪ್ಪುಗಳನ್ನೆಣಿಸಿ ಮೂದಲಿಸುತ್ತಾ ಭೀಮನು ಗದಾಪ್ರಹಾರ ಮಾಡುತ್ತಿದ್ದಾನೆ.

ಇದು ಲಾಕ್ಷಾಗೇಹದಾಹಕ್ಕಿದು ವಿಷಮ ವಿಷಾನ್ನಕ್ಕಿದಾ ನಾಡಜೂದಿಂ
ಗಿದು ಪಾಂಚಾಲೀ ಪ್ರಪಂಚಕ್ಕಿದು ಕೃತಕಸಭಾಲೋಕನ ಭ್ರಾಂತಿಗೆಂದೋ
ವದೆ ಪೊಯ್ದಂ ಕಾಲ್ಗಳಂ ಕಯ್ಗಳನಗಲ್ದುರಮಂ ಕೆನ್ನೆಯ ನೆತ್ತಿಯಂ ಕೋ
ಪದಿ ನಯ್ದುಂ ದುರ್ಣಯಕ್ಕಯ್ದೆಡೆಯನುರುಗದಾ ದಂಡದಿಂ ಭೀಮಸೇನಮ್ ॥

ಅಪರಾಧಿಯಾದ ದುರ್ಯೋಧನ ಆಲಂಬನ, ಲಾಕ್ಷಾಗೃಹದಹನ ಮುಂತಾದ ಕಾರ್ಯಗಳು ಉದ್ದೀಪನ. ಗದಾಪ್ರಹಾರ ಅನುಭಾವ, ಅಮರ್ಷ, ಉಗ್ರತೆಗಳು ಸಂಚಾರಿ, ಕ್ರೋಧ ಸ್ಥಾಯಿ.

ರಸದಂತೆ ಸಂಚಾರಿ ಭಾವವೂ ಕೂಡ ಮುಖ್ಯವಾಗಿ ವ್ಯಂಗ್ಯವಾಗಬಹುದು. ಉದಾ: ಶ್ರೀರಾಮನು ಸೀತಾವಿರಹಸಂತಪ್ತನಾಗಿ ಹಲುಬುತ್ತಿದ್ದಾನೆ:

ಕಳಹಂಸಾಲಸಯಾನೆಯಂ ಮೃಗಮದಾಮೋದಾಸ್ಯನೀಶ್ವಾಸೆಯಂ
ತಳಿರೇ ತಾವರೆಯೇ ಮದಾಳಿಕುಳಮೇ ಕನ್ನೆಯ್ದಿಲೇ ಮತ್ತಕೋ ।
ಕಿಳಮೇ ಕಂಡಿರೆ ಪಲ್ಲವಾಧರೆಯ ನಂ ಭೋಜಾಸ್ಯೆಯಂ ಭೃಂಗ ಕುಂ-
ತಳೆಯಂ ಕೈರವನೇತ್ರೆಯಂ ಪಿಕರವ ಪ್ರಖ್ಯಾತೆಯಂ ಸೀತೆಯಮ್ ॥

ಪ್ರಾಣಿಗಳನ್ನೂ, ಗಿಡಗಳನ್ನೂ ಸಂಬೋಧಿಸಿದ್ದರಿಂದ ಉನ್ಮಾದಭಾವ ವ್ಯಂಗ್ಯವಾಗುತ್ತದೆ. ಇದು ಅನುಚರಭಾವವಾದ್ದರಿಂದ ಪರ್ಯಂತದಲ್ಲಿ ವಿಪ್ರಲಂಭ ಶೃಂಗಾರಕ್ಕೇ ಸಹಕಾರಿಯಾಗುತ್ತದೆ.

ಕಾವ್ಯದಲ್ಲಿರುವ ಅಂಶ ಮೂರು:- ಶಬ್ದ, ವಾಚ್ಯಾರ್ಥ, ವ್ಯಂಗ್ಯ. ಇವುಗಳಲ್ಲಿ ಕಥಾವಸ್ತು, ಅಲಂಕಾರಗಳು ವಾಚ್ಯ. ಕೆಲವು ವೇಳೆ ಇವೂ ವ್ಯಂಗ್ಯವಾಗಬಹುದು. ರಸಭಾವಗಳು ಮಾತ್ರ ಯಾವಾಗಲೂ ವ್ಯಂಗ್ಯವೇ. ಅರ್ಥಕ್ಕಿಂತ ಶಬ್ದಪ್ರಾಸವೇ ಕಾವ್ಯದಲ್ಲಿ ಮುಖ್ಯವಾಗಿ ತೋರುತ್ತಿದ್ದರೆ ಅದು ಅಧಮ ಕಾವ್ಯ. ಶಬ್ದಪ್ರಾಸಕ್ಕಿಂತ ವಾಚ್ಯಾರ್ಥ ಸ್ಫುಂದರವಾಗಿದ್ದರೆ ಮಧ್ಯಮಕಾವ್ಯ. ಶಬ್ದ-ಅರ್ಥಗಳಿಗಿಂತ ವ್ಯಂಗ್ಯವು ಸುಂದರವಾಗಿದ್ದರೆ ಉತ್ತಮಕಾವ್ಯ. ಇದನ್ನೇ ಧ್ವನಿಕಾವ್ಯವೆನ್ನುತ್ತಾರೆ. ಅದರಲ್ಲಿಯೂ ರಸಧ್ವನಿ ಅತ್ಯುತ್ತಮವೆಂದು ಅಲಂಕಾರಿಕರ ಅಭಿಪ್ರಾಯ. ರಸಿಕರಿಗೆ ಇದು ಸಂಮತ.

ಮನೋಗತವಾದ ಭಾವವನ್ನು ವರ್ಣಿಸಿ ತಿಳಿಸುವುದು ಅತಿಕಠಿಣ. ಗೀತ, ವಾದ್ಯ, ಅಭಿನಯ, ನೃತ್ಯ, ಮೊದಲಾದವು ಭಾವಾವಿಷ್ಕರಣಕ್ಕೆ ಸಹಕಾರಿಯಾಗುತ್ತವೆ. ಆದ್ದರಿಂದಲೇ ಶ್ರವ್ಯಕಾವ್ಯಗಳಿಗಿಂತ ರಂಗಸ್ಥಳದಲ್ಲಿ ಅಭಿನಯಿಸುವ ದೃಶ್ಯಕಾವ್ಯಗಳಿಂದ ರಸಭಾವಗಳು ಚೆನ್ನಾಗಿ ಅಭಿವ್ಯಕ್ತವಾಗುತ್ತವೆ. ನಾಟ್ಯಶಾಸ್ತ್ರದ ಗಮ್ಯರಸಭಾವಗಳು ಅಭಿವ್ಯಕ್ತಿ. ಅಭಿವ್ಯಕ್ತಿಯೇ ಆನಂದ. ಅದೇ ಪರನಿರ್ವೃತಿ.

* * *

ಭಾರತೀಯ ಕಲಾ ದರ್ಶನ, ಸಂ: ಅ.ನ. ಕೃಷ್ಣರಾವ್
ಪ್ರ: ಮೈಸೂರು ರಾಜ್ಯದ ಸಂಗೀತ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಬೆಂಗಳೂರು - ೧೯೬೪.

'ಪ್ರವೇಶ' 'ಕಾವ' 'ಜಾಣ' ಮತ್ತು 'ರತ್ನ' ಕನ್ನಡ ಸಾಹಿತ್ಯ ಪರಿಷತ್ತಿನ ಬಹು ಜನಪ್ರಿಯವಾದ ಸಾಹಿತ್ಯ ಪರೀಕ್ಷೆಗಳು. ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪದವಿ ವಿದ್ಯಾರ್ಥಿಗಳು ತಮ್ಮ ಸಾಹಿತ್ಯ ಜ್ಞಾನವನ್ನು ಒರೆಗೆ ಹಚ್ಚಿ ನೋಡಿಕೊಳ್ಳುವುದಕ್ಕೋ ಮುಂದಿನ ಪರೀಕ್ಷೆಗಳಿಗೆ ಅಗತ್ಯವಾದ ಆತ್ಮವಿಶ್ವಾಸವನ್ನು ಗಳಿಸಿಕೊಳ್ಳುವುದಕ್ಕೋ ಈ ಪರೀಕ್ಷೆಗಳನ್ನು ತೆಗೆದುಕೊಂಡರೆ, ವಯಸ್ಸಾಗಿರುವವರು ತಮ್ಮೊಳಗಿರುವ ವಿದ್ಯಾರ್ಥಿಯನ್ನು ಜೋಪಾನವಾಗಿ ಕಾಪಾಡಿಕೊಂಡು, ಪೋಷಿಸಿಕೊಂಡು ಹೋಗುವ ಉದ್ದೇಶದಿಂದ ಪರೀಕ್ಷೆ ಬರೆಯುತ್ತಾರೆ. ಈ ಪರೀಕ್ಷೆಗಳಲ್ಲಿ ಉತ್ತೀರ್ಣತೆ ಪಡೆಯುವುದರಿಂದ ಕರ್ನಾಟಕ ಸರ್ಕಾರದ ನೌಕರರು ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯ ಉತ್ತೀರ್ಣತೆಯಿಂದ ವಿನಾಯಿತಿ ಪಡೆಯಬಹುದಾದ ಲೌಕಿಕ ಲಾಭವೂ ಉಂಟು.

**ಡಾ. ನಲ್ಲೂರು ಪ್ರಸಾದ್. ಆರ್.ಕೆ.**
**ಅಧ್ಯಕ್ಷರು**

**ಕನ್ನಡ ಸಾಹಿತ್ಯ ಪರಿಷತ್ತು**
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮